# Anti Land-Grabbing Action Committee
# ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ

No. 759, 5th Main, 8th Cross, R.T.Nagar, II Block, Bangalore 560032 Ph: 094481 20305

Website : http://savekarnataka.in mail: karnatakasave@gmail.com


---

09.12.2016

**Hon'ble Prime Minister,**

**Sub: Regarding demonetization of 500 and 1000 Rupee Notes.**

**Ref: Our letter dated 12.01.2016 regarding suggestions to tackle black Money within India.**

**We welcome Your Honour's decision of demonetization of 500 and 1000 Rupee Notes with effect from 8th November 2016. We appreciate the initial good intent behind the decision. But the new intents now getting promoted, i.e. promoting cashless transactions could have been done in a humanitarian and dignified manner. In the letter under reference, we had mentioned that:**

***According to the Socio economic and caste census for rural India, 75 per cent of 17.9 crore households in rural India, the monthly income of the highest-earning member is less than Rs.5,000. Considering this, majority of the Indian population do not need currency of higher denomination for their day to day transactions. Thus, by demonetizing Notes of Rs. 1000 and Rs. 500, the black money stashed in the basement of the fraudsters, realtors, betting , so-called Swiss Banks of India which include religious institutions, educational institutions etc., can be made worthless in one go. The ceiling limit fixed should be such that exchange of the Notes without revealing their source becomes difficult thereby putting an end to the circulation of most of the unaccounted money.***

**We had put forth that the poor of this country do not need notes of higher denomination and with the ban of 500 and 1000 rupee notes, we were expecting more of 50 and 100 rupee notes and a new denomination note of less than 500 rupees, may be a 200 or 300 rupee note and certainly did not expect new 500 and 2000 rupee notes. But we believed that being aware of the havoc of black money, Your Honour would have taken all possible measures, which any reasonable person would expect to prevent misuse of the new notes of higher denomination. This included not involving the very corrupt bureaucrats from the departments concerned to implement the fight against black money and corruption, who were encouraging black money hoarders. But the recent shocking revelations in the media of crores of money in 2000 rupee notes being found with few individuals more than confirms that the purpose of demonetisation cannot be achieved. We are sure Your Honour has full information about the fact that what has reported in the media is just a fraction of the enormous black money in the form of new 2000 notes hoarded by people against whom Your Honor wanted to wage a war. The 2000 rupee notes have only made handling and hoarding of black money much easier. The huge gap between 100 rupee note and the 2000 rupee note can only be interpreted as to make black money hoarding easy. The only pathetic impact of the note ban has been that the honest, poor and middle class citizens have been put to hardship, not to mention frequent humiliations and other things including and police atrocities against them and deaths. The end result is that the corrupt who are hoarding huge quantity of black money in new notes are having the last laugh instead of losing sleep. We sincerely feel that now the withdrawal of 2000 rupee notes will be another Herculean task which would need strict monitoring, which the system is not capable of with the same set of officers in all major departments and banks including the Reserve Bank of India.**

**It is relevant to mention here the fact that in the 2007 report of land grabbing given under my Chairmanship, the names of judges of Hon'ble Karnataka High Court and the Supreme Court of India who had obtained land illegally had been mentioned. Lack of action against them resulted in enormous grabbing of public lands of about 4,00,000 acres valued at Rs. 4,00,000 crores in Karnataka by creating fictitious documents in connivance with corrupt officers/officials. Action against illegality by judges would have certainly put a fear in the minds of other land grabbers. If such is the magnitude of public land grabbed in Karnataka alone, the public lands grabbed all over India is too huge to even imagine. The value of public lands criminally grabbed in Karnataka alone is more than the black money of 3.5 lakh crores which was expected to be wiped out from the entire country by the demonetization. We are of the opinion that since a significant percentage of black money is in real estate transactions, that too by grabbing public land illegally, this should be addressed in a war footing manner.**

**Further, it is very unfortunate that the non-implementation of the Lokpal Act and the Whistle-blowers' Protection Act , though passed more than two years back has certainly undermined the fight against black money and corruption.**

**Under these circumstances, we request Your Honour to first publish the movable and immovable assets in the names of All India Service officers, their family and other close relatives and all such officers who have been involved in the recent fight against black money. Not doing so has only resulted in strengthening the black money hoarding network involving all the four pillars of democracy.**

**We sincerely hope that at least now before making another move against black money hoarders, Your Honour would address the serious issues raised in this letter and the letter under reference.**

**Thanking you,**

**Yours sincerely,**

**(A.T. Ramaswamy)**
**Convener**

**Sri Narendra Modi**
**Hon'ble Prime Minister of India,**
**South Block, Raisina Hill,**
**New Delhi-110011.**

**Copy to:**

1. **Sri Arun Jaitley, Hon'ble Finance Minister, Ministry of Finance, Department of Economic Affairs, North Block, New Delhi – 110 001.**

2. **Dr. Urjit Patel, Governor , Reserve Bank of India, RBI Main Building, Shahid Bhagat Singh Road, Fort, Mumbai – 400 001.**

**09.12.2016**

**ಗೌರವಾನ್ವಿತ ಪ್ರಧಾನ ಮಂತ್ರಿಗಳೇ ,**

**ವಿಷಯ: ರೂ. 500 ಮತ್ತು 1000 ಮುಖಬೆಲೆಯ ನೋಟುಗಳನ್ನು ರದ್ದು ಪಡಿಸಿರುವ ಬಗ್ಗೆ**
**ಉಲ್ಲೇಖ: ಭಾರತದಲ್ಲಿನ ಕಪ್ಪು ಹಣವನ್ನು ನಿಯಂತ್ರಿಸುವ ಬಗ್ಗೆ ನಮ್ಮ ಸಮಿತಿಯು ಬರೆದ ದಿನಾಂಕ 12.01.2016 ರ ಪತ್ರ**

**ದಿನಾಂಕ 08.11.2016 ರಿಂದ ರೂ. 500 ಮತ್ತು 1000 ಮುಖಬೆಲೆಯ ನೋಟುಗಳನ್ನು ರದ್ದು ಪಡಿಸಿರುವ ತಮ್ಮ ನಿರ್ಧಾರವನ್ನು ನಾವು ಸ್ವಾಗತಿಸುತ್ತೇವೆ. ನಿರ್ದಾರದ ಹಿಂದಿರುವ ಮೂಲ ಉತ್ತಮ ಉದ್ದೇಶವನ್ನು ಶ್ಲಾಘಿಸುತ್ತೇವೆ. ಆದರೆ ಈಗ ಉತ್ತೇಜಿಸಲ್ಪಡುತ್ತಿರುವ ಹಣವಿಲ್ಲದ ವ್ಯವಹಾರಗಳ ಹೊಸ ಆಶಯವನ್ನು ಒಂದು ಮಾನವೀಯ ರೀತಿಯಲ್ಲಿ ಹಾಗೂ ಪ್ರಜೆಗಳ ಗೌರವಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಮಾಡಬಹುದಿತ್ತು. ಉಲ್ಲೇಖಿತ ಪತ್ರದಲ್ಲಿ ನಾವು ಈ ರೀತಿ ಬರೆದಿದ್ದೆವು:**

> ***1000 ಮತ್ತು 500 ರೂಪಾಯಿ ನೋಟುಗಳ ಚಲಾವಣೆ ಬಂದ್ ಮಾಡುವುದು. Socio economic and caste census for rural India ಪ್ರಕಾರ ಗ್ರಾಮೀಣ ಭಾರತದಲ್ಲಿ 17.9 ಕೋಟಿ ಕುಟುಂಬಗಳಲ್ಲಿ ಶೇಕಡಾ 75ರಷ್ಟು ಕುಟುಂಬಗಳಲ್ಲಿ ಅತ್ಯಧಿಕ ಗಳಿಕೆಯ ಸದಸ್ಯನ ಮಾಸಿಕ ಆದಾಯ Rs.5,000ಕ್ಕಿಂತ ಕಡಿಮೆ ಇದೆ. ಇದನ್ನು ಪರಿಗಣಿಸಿದರೆ, ಭಾರತೀಯ***

> *ಜನಸಂಖ್ಯೆಯ ಬಹುಪಾಲು ಜನರಿಗೆ ತಮ್ಮ ದಿನದ ವಹಿವಾಟುಗಳಿಗೆ ಹೆಚ್ಚಿನ ಮುಖಬೆಲೆಯ ನೋಟುಗಳ ಅಗತ್ಯವಿಲ್ಲ. ಹೀಗಾಗಿ, 1000 ರೂ. 500ರೂ ನೋಟುಗಳನ್ನು demonetize ಮಾಡುವ ಮೂಲಕ, ವಂಚನೆಯಿಂದ ಗಳಿಸಿದ ಹಣ , ರಿಯಲ್ ಎಸ್ಟೇಟ್ ಕಪ್ಪು ಹಣ , ಭಾರತದ ಸ್ವಿಸ್ ಬ್ಯಾಂಕ್ ಗಳು ಎಂದು ಕರೆಯಲ್ಪಡುವ ಧಾರ್ಮಿಕ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು ಇತ್ಯಾದಿಗಳಿಗೆ ಸೇರಿದ ನೆಲಮಾಳಿಗೆಯಲ್ಲಿ ಬಚ್ಚಿಟ್ಟ ಕಪ್ಪು ಹಣವನ್ನು ಒಂದೇ ಸಾರಿ ನಿಷ್ಪ್ರಯೋಜಕ ಮಾಡಬಹುದು. ಇದಕ್ಕೆ ಕೊಡುವ ಸೀಲಿಂಗ್ ಮಿತಿಯನ್ನು ಸರಿಯಾಗಿರಿಸಿದರೆ ಕಪ್ಪು ಹಣದ ಮೂಲವನ್ನು ವಿವರಿಸಲು ಕಷ್ಟವಾಗುವುದರಿಂದ ಬಹುತೇಕ ಕಪ್ಪು ಹಣದ ಚಲಾವಣೆಗೆ ಕೊನೆ ಹಾಡಬಹುದು.*

**ನಾವು ಈ ದೇಶದ ಬಡ ಜನರಿಗೆ ರೂ. 500 ಮತ್ತು 1000 ಮುಖಬೆಲೆಯ ನೋಟುಗಳ ಅವಶ್ಯಕತೆ ಇಲ್ಲವೆಂಬುದನ್ನು ಹೇಳಿದ್ದೆವು. ನಾವು ರೂ. 50 ಮತ್ತು 100 ಮುಖಬೆಲೆಯ ನೋಟುಗಳ ಹೆಚ್ಚಿನ ಮುದ್ರಣವನ್ನು ಹಾಗೂ 500 ಮುಖಬೆಲೆಯ ನೋಟಿಗಿಂತ ಕಡಿಮೆ , ಅಂದರೆ , ರೂ. 200 ಅಥವಾ 300 ಮುಖಬೆಲೆಯ ನೋಟುಗಳ ಚಲಾವಣೆಯನ್ನು ನಿರೀಕ್ಷಿಸಿದ್ದೆವು. ಖಂಡಿತವಾಗಿಯೂ ರೂ. 2000 ಮುಖಬೆಲೆಯ ನೋಟುಗಳನ್ನು ನಿರೀಕ್ಷಿಸಿರಲಿಲ್ಲ. ಆದಾಗ್ಯೂ , ಕಪ್ಪು ಹಣದ ಕರಾಳ ಮುಖ ಅರಿತಿರುವ ತಾವು, ಒಂದು ಸಮಂಜಸ ವ್ಯಕ್ತಿ ನಿರೀಕ್ಷಿಸುವ ರೀತಿಯಲ್ಲಿ, ಹೆಚ್ಚಿನ ಮುಖಬೆಲೆಯ ನೋಟಿನ ಚಲಾವಣೆಯಿಂದ ಉದ್ಭವಿಸಬಹುದಾದ ಎಲ್ಲಾ ದುಷ್ಪರಿಣಾಮಗಳನ್ನು ತಡೆಯಲು ಬೇಕಾದ ಕ್ರಮಗಳನ್ನು ತೆಗೆದುಕೊಳ್ಳುವಿರೆಂದು ನಂಬಿದ್ದೆವು. ಕಪ್ಪು ಹಣ ನಿಯಂತ್ರಣಕ್ಕೆ ಸಂಬಂಧಪಟ್ಟ ಇಲಾಖೆಗಳಲ್ಲಿ, ಕಪ್ಪು ಹಣವನ್ನು ಸಂಗ್ರಹಿಸಲು ಉತ್ತೇಜಿಸುತ್ತಿದ್ದ ಅಧಿಕಾರಿಗಳನ್ನು ಈಗ ಕಪ್ಪು ಹಣ ನಿಯಂತ್ರಿಸುವ ಕಾರ್ಯಕ್ರಮದಲ್ಲಿ ತೊಡಗಿಸುವುದಿಲ್ಲವೆಂಬುದನ್ನು ನಿರೀಕ್ಷಿಸಿದ್ದೆವು. ಆದರೆ ರೂ. 2000 ಮುಖಬೆಲೆಯ ಹೊಸ ನೋಟುಗಳು ಕೆಲವೇ ವ್ಯಕ್ತಿಗಳಲ್ಲಿ ಸಂಗ್ರಹವಾಗುತ್ತಿರುವ ಬೆಚ್ಚಿ ಬೀಳಿಸುವ ಸುದ್ದಿಗಳು ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುವುದನ್ನು ನೋಡಿದಾಗ , ನೋಟು ರದ್ದತಿಯ ಆಶಯ ಕೈಗೂಡುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಅದರೆ ಮಾಧ್ಯಮಗಳಲ್ಲಿ ಬಹಿರಂಗವಾಗುತ್ತಿರುವುದು ಕೇವಲ ಅಲ್ಪ ಪ್ರಮಾಣದಾಗಿದ್ದು, ಇನ್ನೂ ಅಧಿಕ ಪ್ರಮಾಣದಲ್ಲಿ ಕಳ್ಳದಂಧೆ ನಡೆದಿರುವ ವಿಷಯ ತಮಗೂ ತಿಳಿದಿದೆ ಎಂದು ನಂಬಿದ್ದೇವೆ. ರೂ.2000 ಮುಖಬೆಲೆಯ ನೋಟುಗಳು ಕಪ್ಪು ಹಣದ ನಿರ್ವಹಣೆ ಮತ್ತು ಸಂಗ್ರಹಣೆಯನ್ನು ಇನ್ನೂ ಸುಲಭಗೊಳಿಸಿದೆ. ರೂ. 100 ಮತ್ತು 2000 ಮುಖಬೆಲೆಯ ನೋಟುಗಳ ನಡುವೆ ಅಂತರ ಬಹಳ ಹೆಚ್ಚಾಗಿದ್ದು , ಇದು ಕೇವಲ ಕಪ್ಪು ಹಣ ಸಂಗ್ರಹಣೆಗೆ ಅನುಕೂಲವಾಗಲು ಮಾಡಿರುವಂತೆ ವಿಶ್ಲೇಷಿಸಬೇಕಾಗುತ್ತದೆ. ಇದರಿಂದಾದ ಕರುಣಾಜನಕ ಪರಿಣಾಮವೆಂದರೆ, ಪ್ರಾಮಾಣಿಕ ಬಡ ಮತ್ತು ಮಧ್ಯಮ ವರ್ಗದ ಜನರು ತೊಂದರೆಗೊಳಗಾಗಿ, ಅಪಮಾನ, ಪೊಲೀಸ್ ದೌರ್ಜನ್ಯ ಸಹಿಸಿಕೊಳ್ಳುವುದಲ್ಲದೆ, ಕೆಲವು ಸಾವುಗಳಾಗಿರುವುದು ವಿಷಾಧನೀಯ. ಒಟ್ಟಾರೆ, ಇದರ ಅಂತಿಮ ಫಲಿತಾಂಶ ಏನೆಂದರೆ, ಕಪ್ಪು ಹಣ ಸಂಗ್ರಹಿಸಿಟ್ಟಿದ್ದ ವ್ಯಕ್ತಿಗಳು ತಮ್ಮ ನೆಮ್ಮದಿ ಕಳೆದುಕೊಳ್ಳುವ ಬದಲು ಕೊನೆಯ ಅಟ್ಟಹಾಸದ ನಗೆಯನ್ನು ಬೀರುತ್ತಿರುವುದು. ಈಗ ರೂ. 2000 ಮುಖಬೆಲೆಯ ನೋಟುಗಳನ್ನು ಹಿಂಪಡೆಯುವುದು ಇನ್ನೊಂದು ಕಷ್ಟಸಾಧ್ಯವಾದ ಕೆಲಸವಾಗಿದ್ದು, ಇದೇ ಅಧಿಕಾರಿಗಳನ್ನು ಹೊಂದಿರುವ ಸಂಬಂಧಪಟ್ಟ ಇಲಾಖೆಗಳ, Reserve Bank of India ಒಳಗೊಂಡಂತೆ , ಈಗಿರುವ ವ್ಯವಸ್ಥೆಯು ಅದನ್ನು ನಿಭಾಯಿಸುವ ಸ್ಥಿತಿಯಲ್ಲಂತೂ ಇಲ್ಲ ಎಂಬುದು ನಮ್ಮ ಪ್ರಾಮಾಣಿಕವಾದ ಅಭಿಪ್ರಾಯವಾಗಿದೆ.**

**ಇಲ್ಲಿ ಪ್ರಸ್ತಾಪಿಸಲು ಸೂಕ್ತವಾದ ಇನ್ನೊಂದು ವಿಷಯವೆಂದರೆ 2007ರಲ್ಲಿ ನನ್ನ ಅಧ್ಯಕ್ಷತೆಯಲ್ಲಿ ನೀಡಿದ ಭೂಕಬಳಿಕೆ ಪ್ರಕರಣಗಳ ವರದಿಯಲ್ಲಿ , ಅಕ್ರಮವಾಗಿ ಭೂಮಿ ಪಡೆದ, ಉಚ್ಚ ನ್ಯಾಯಾಲಯಗಳ ಮತ್ತು ಸರ್ವೋಚ್ಚ ನ್ಯಾಯಾಲಯದ ಹಲವಾರು ನ್ಯಾಯಾಧೀಶರ ಹೆಸರುಗಳನ್ನು ಕೊಡಲಾಗಿದೆ. ಅವರುಗಳ ವಿರುದ್ಧ ಯಾವುದೇ ಕ್ರಮ ಜರುಗಿಸದ ಪರಿಣಾಮವಾಗಿ ಕರ್ನಾಟಕ ರಾಜ್ಯದಲ್ಲಿ ಸುಮಾರು ಳ ಲಕ್ಷ ಕೋಟಿ ಬೆಲೆಬಾ ಳುವ 4 ಲಕ್ಷ ಎಕರೆ ಭೂಮಿಗೆ ಅಧಿಕಾರಿ /ನೌಕರರ ಸಹಯೋಗದಿಂದ ಸುಳ್ಳು ದಾಖಲೆ ಸೃಷ್ಟಿಸಿಕೊಂಡು ಭೂಗಳ್ಳರು ದೋಚಿದ್ದಾರೆ. ಅಕ್ರಮವೆಸಗಿದ್ದ ನ್ಯಾಯಾಧೀಶರ ವಿರುದ್ಧ ಕ್ರಮಗಳಾಗಿದ್ದರೆ, ಭೂಗಳ್ಳರಿಗೆ ಭಯ ಹುಟ್ಟುವಂತಾಗುತ್ತಿತ್ತು. ಕರ್ನಾಟಕ ರಾಜ್ಯ ಒಂದರಲ್ಲಿಯೇ ಇಷ್ಟು ಪ್ರಮಾಣದಲ್ಲಿ ಭೂಕಬಳಿಕೆ ಆಗಿದೆಯೆಂದರೆ, ಇಡೀ ದೇಶದಲ್ಲಿ ಆಗಿರಬಹುದಾಯದ ಭೂಕಬಳಿಕೆ ಪ್ರಮಾಣವು ಊಹಿಸಲಾರದಷ್ಟು ದೊಡ್ಡದಾಗಿರುತ್ತದೆ. ನೋಟು ರದ್ದತಿಯಿಂದ ದೇಶಾದ್ಯಂತ ಅಳಿಸಲು ಆಶಿಸಿದ್ದ 3.5 ಲಕ್ಷ ಕೋಟಿ ಕಪ್ಪು ಹಣದ ಮೊತ್ತಕ್ಕಿಂತಲೂ ಕರ್ನಾಟಕದಲ್ಲಿ ಕಬಳಿಕೆಯಾಗಿರುವ ಸರ್ಕಾರಿ ಭೂಮಿಯ ಬೆಲೆ ಅಧಿಕವಾಗಿರುತ್ತದೆ. ಕಪ್ಪು ಹಣದ ಪ್ರಮುಖ ಭಾಗ ಭೂ ಅವ್ಯವಹಾರಗಳಿಗೆ ಸಂಬಂದಿಸಿದ್ದು, ಅದರಲ್ಲೂ ಮುಖ್ಯವಾಗಿ ಸರ್ಕಾರಿ ಭೂಮಿಗೆ ಸುಳ್ಳು ದಾಖಲೆ ಸೃಷ್ಟಿಸಿಕೊಂಡು ಮಾಡಿರುವ ಹಣವಾಗಿರುವುದರಿಂದ, ಈ ಗಂಭೀರ ವಿಷಯದ ಬಗ್ಗೆ ಸಮರೋಪಾದಿಯಲ್ಲಿ ಕ್ರಮಗಳಾಗಬೇಕೆಂಬುದು ನಮ್ಮ ಸ್ಪಷ್ಟ ಅಭಿಪ್ರಾಯವಾಗಿದೆ.**

**Lokpal ಮತ್ತು Whistle-blowers' Protection ಕಾಯ್ದೆಗಳು ಜಾರಿಗೆ ಬಂದು ಎರಡು ವರ್ಷಗಳೇ ಕಳೆದಿದ್ದರೂ , ಅವುಗಳನ್ನು ಅನುಷ್ಠಾನಗೊಳಿಸದಿರುವುದು, ಕಪ್ಪು ಹಣ ಮತ್ತು ಭ್ರಷ್ಟಾಚಾರದ ವಿರುದ್ದದ ಸಮರವನ್ನು ದುರ್ಬಲಗೊಳಿಸಿದೆ.**

ಈ ಹಿನ್ನೆಲೆಯಲ್ಲಿ, ಎಲ್ಲಾ ಅಖಿಲ ಭಾರತ ಸೇವೆಯಲ್ಲಿರುವ ಅಧಿಕಾರಿಗಳ, ಅವರ ಕುಟುಂಬದವರ ಮತ್ತು ಅವರ ನಿಕಟ ಸಂಬಂಧಿಗಳ ಹೆಸರಿನಲ್ಲಿರುವ, ಮತ್ತು ಈಗ ಕಪ್ಪು ಹಣವನ್ನು ಪತ್ತೆಹಚ್ಚುವಲ್ಲಿ ತೊಡಗಿರುವ ಎಲ್ಲಾ ಅಧಿಕಾರಿಗಳ ಸ್ಥಿರಾಸ್ಥಿ ಹಾಗೂ ಚರಾಸ್ಥಿಗಳ ವಿವರಗಳನ್ನು ಮೊದಲು ಪ್ರಕಟಿಸಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇವೆ. ಇದನ್ನು ಮಾಡದಿರುವ ಪರಿಣಾಮವಾಗಿ ಪ್ರಜಾಪ್ರಭುತ್ವದ ನಾಲ್ಕೂ ಅಂಗಗಳನ್ನು ಒಳಗೊಂಡಿರುವ ಕಪ್ಪು ಹಣ ಸಂಗ್ರಹಿಸುವ ಕಳ್ಳದಂಧೆಕೋರರ ಜಾಲವು ಬಲಿಷ್ಠಗೊಂಡಿದೆ.

ಈಗಲಾದರೂ, ತಾವು ಕಪ್ಪು ಹಣದ ವಿರುದ್ಧ ತೆಗೆದುಕೊಳ್ಳುವ ಇನ್ನೊಂದು ನಿರ್ಧಾರಕ್ಕೂ ಮುನ್ನ , ಈ ಪತ್ರದಲ್ಲಿ ಹಾಗೂ ಉಲ್ಲೇಖಿತ ಪತ್ರದಲ್ಲಿ ಪ್ರಸ್ತಾಪಿಸಿರುವ ಗಂಭೀರ ಅಂಶಗಳ ಬಗ್ಗೆ ಗಮನಹರಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತೀರೆಂದು ಭಾವಿಸುತ್ತೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಎ.ಟಿ.ರಾಮಸ್ವಾಮಿ)
ಸಂಚಾಲಕರು